ಓ. ಎಸ್. 324 /2015
ಪಿ ಡಬ್ಲ್ಯೂ- 1

**ದಿನಾಂಕಃ 16-07-2019 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.**

ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ **ವಕೀಲರಿಂದಃ**

ಈ ದಾವೆಯನ್ನು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನಾನು ಮತ್ತು ಇತರೇ ವಾದಿಯರು ಸೇರಿ ನೀಡಿರುತ್ತೇವೆ. ನನ್ನ ಮತ್ತು ಇತರೇ ವಾದಿಯರಿಗೆ ವಿವಾಹ ಆಗಿರುತ್ತದೆ ಎಂದರೆ ಸರಿ. 1 ನೇ ವಾದಿಯ ವಿವಾಹ ಆಗಿ 27 ವರ್ಷ ಆಗಿರುತ್ತದೆ. ಅವರ ಪತಿಯ ಹೆಸರು ಚಿಕ್ಕವೀರಪ್ಪ ಆಗಿದ್ದು, ರೈಲ್ವೆಗೊಲ್ಲಹಳ್ಳಿ ಗ್ರಾಮ ಆಗಿರುತ್ತದೆ. 1 ನೇ ವಾದಿಯು ತನ್ನ ವಿವಾಹ ಆದ ನಂತರ ತನ್ನ ಪತಿಯ ಮನೆಯಲ್ಲಿ ವಾಸವಿರುತ್ತಾರೆಂದರೆ ಸರಿ. ಎರಡು ವರ್ಷಗಳ ಅಂತರದಲ್ಲಿ ಎರಡನೇ ವಾದಿಯ ವಿವಾಹವಾಗಿದ್ದು, ಅವರ ಪತಿಯ ಹೆಸರು ವೆಂಕಟೇಶಪ್ಪ , ಸೂಲಕೆರೆ ಆಗಿದ್ದು ಮದುವೆ ಆದ ನಂತರ ಅವರು ತನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆಂದರೆ ಸರಿ. ನನ್ನ ಪತಿಯ ಹೆಸರು ಸಿದ್ದಗಂಗಪ್ಪ ಆಗಿದ್ದು, ನನ್ನ ಮದುವೆ ಆದ ನಂತರ ನಾನು ನನ್ನ ಪತಿಯ ಮನೆಯಲ್ಲಿ ವಾಸವಾಗಿರುತ್ತೇನೆಂದರೆ ಸರಿ. ನನ್ನ ದಾವೆಯಲ್ಲಿ ನಮ್ಮ ಗಂಡನ ಹೆಸರು ಮತ್ತು ವಾಸ ಮಾಡುವ ವಿಳಾಸವನ್ನು ಬರೆಯಿಸಿಲ್ಲ ಎಂದರೆ ಸರಿ. ತಾವರೆಕೆರೆ ಗ್ರಾಮದ ಕುಂಬಾರಬೀದಿಯಲ್ಲಿ ನನ್ನ ತವರುಮನೆಗೆ ಸೇರಿದಂತೆ ಒಂದು ಮನೆ ಇರುತ್ತದೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿ.

ನನ್ನ ತಂದೆಗೆ ಸೇರಿದಂತೆ ಈ ಹಿಂದೆ ಎರಡುವರೆ ಎಕರೆ ಆಸ್ತಿ ಇತ್ತು. ಅದನ್ನು ಈಗ ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಮಾರಾಟ ಮಾಡಿದ ಸ್ವತ್ತು ಮತ್ತು ಖರೀದಿದಾರರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯು ಮೃತರಾಗಿದ್ದು, ಅವರ ಮಕ್ಕಳೂ ಸಹ ಮೃತರಾಗಿರುತ್ತಾರೆ. 1 ನೇ ಪ್ರತಿವಾದಿಗೆ ಹೇಮಂತ್ ಎಂಬ ಮೊಮ್ಮಗ ಇರುತ್ತಾನೆ. ಅವನನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿಲ್ಲ. 2 ನೇ ಪ್ರತಿವಾದಿಯು ಹೇಮಂತ್ ರವರ ತಾಯಿಯಾಗಿರುತ್ತಾರೆ. ಅವರು ಕಾಮಾಕ್ಷಿಪಾಳ್ಯದಲ್ಲಿ ವಾಸವಿರುತ್ತಾರೆ. 3 ನೇ ಪ್ರತಿವಾದಿಯು ನನ್ನ ದೊಡ್ಡಕ್ಕ ಆಗಿದ್ದು, ಅವರ ವಿವಾಹವಾಗಿ ಎಷ್ಟು ವರ್ಷಗಳು ಆಗಿವೆ ಎಂದು ಗೊತ್ತಿರುವುದಿಲ್ಲ. ಅವರು ಕುಣಿಗಲ್ ಗ್ರಾಮದ ವ್ಯಕ್ತಿಯ ಜೊತೆ ವಿವಾಹ ಆಗಿರುತ್ತಾರೆ. ಅವರ ಪತಿಯ ಹೆಸರು ಗೊತ್ತಿರುವುದಿಲ್ಲ. 4 ನೇ ಪ್ರತಿವಾದಿಯು ನನ್ನ ಅಣ್ಣನಾಗಿದ್ದು ತಾವರೆಕೆರೆಯಲ್ಲಿ ವಾಸವಿರುತ್ತಾರೆ. 5 ನೇ ಪ್ರತಿವಾದಿಯು ನನ್ನ ಅತ್ತಿಗೆ ಆಗಿರುತ್ತಾರೆ. ಅವರು ಬ್ಯಾಟರಾಯನಪುರದಲ್ಲಿ ವಾಸವಿರುತ್ತಾರೆ. ಪ್ರತಿವಾದಿ-1 ರಿಂದ 5 ರವರು ಎಲ್ಲಿ ವಾಸಮಾಡುತ್ತಿದ್ದಾರೆಂದು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ. ನಾನು ಮತ್ತು 1 ರಿಂದ 5 ನೇ ಪ್ರತಿವಾದಿಯರು ವಿಶ್ವಾಸದಿಂದ ಇರುತ್ತೇವೆ ಎಂದರೆ 4 ನೇ

ಪ್ರತಿವಾದಿಯನ್ನು ಹೊರತುಪಡಿಸಿ ಉಳಿದವರ ಜೊತೆ ವಿಶ್ವಾಸದಿಂದ ಇರುತ್ತೇವೆ. ನಾವು ಮತ್ತು 1ರಿಂದ 5ನೇ ಪ್ರತಿವಾದಿಯರು ಕುಟುಂಬದ ಕಾರ್ಯ ಕ್ರಮಗಳಲ್ಲಿ ಒಟ್ಟಾಗಿ ಸೇರುತ್ತೇವೆ ಎಂದರೆ ಸರಿ. ಸಿದ್ದಗಂಗಯ್ಯನವರು ಮೃತರಾಗಿ 12-13 ವರ್ಷಗಳು ಕಳೆದಿದ್ದು, ಅವರ ಅಂತ್ಯ ಸಂಸ್ಕಾರದಲ್ಲಿ ನಾವುಗಳೆಲ್ಲಾ ಭಾಗವಹಿಸಿದ್ದೆವು ಎಂದರೆ ಸರಿ. ಸಿದ್ದನಂಜಯ್ಯನವರು ಜೀವಂತವಾಗಿದ್ದ ಕಾಲದಲ್ಲಿ ಎಲ್ಲಾ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲದ ರೀತಿಯಲ್ಲಿ ಮಾರಾಟ ಮಾಡಿರುತ್ತಾರೆ. ಸದರಿ ಸಿದ್ದನಂಜಯ್ಯನವರು ಯಾವಾಗ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆಂದು ನಾನು ತಿಳಿದುಕೊಂಡಿರುತ್ತೇನೆ. ಸದರಿ ಮಾರಾಟದ ಸಂಬಂಧವಾಗಿ ನಾನು ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ.

ಸಿದ್ದನಂಜಯ್ಯನವರು ಮೃತರಾದ 1 ವರ್ಷಗಳ ತರುವಾಯ ನಾನು ಮಾರಾಟ ಮಾಡಿದ ಬಗ್ಗೆ ದಾಖಲೆಯನ್ನು ತೆಗೆಸಿರುತ್ತೇನೆ. ಕುಂಬಾರ ಬೀದಿಯಲ್ಲಿ ಇರುವ ಮನೆಯು ಬಿದ್ದು ಹೋಗಿರುತ್ತದೆ. 4ನೇ ಪ್ರತಿವಾದಿಯು ಎಲ್ಲಿ ವಾಸವಾಗಿರುತ್ತಾರೆಂದು ನನಗೆ ನಿಖರವಾಗಿ ಗೊತ್ತಿರುವುದಿಲ್ಲ. ನನ್ನ ತಂದೆಗೆ ಸೇರಿದಂತೆ ಈಗ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಪುಟ್ಟಮ್ಮ ಎಂಬುವವರು ಮೊದಲನೇ ಹೆಂಡತಿ, ಸಿದ್ದಲಿಂಗಮ್ಮ ಎಂಬುವವರು ಎರಡನೇ ಹೆಂಡತಿ ಎಂದರೆ ಸರಿ. ಪುಟ್ಟಮ್ಮನವರಿಗೆ ಸಿದ್ದಲಿಂಗಪ್ಪ ಮತ್ತು ನಾಗಮ್ಮ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಸಿದ್ದನಂಜಪ್ಪ ಮೃತರಾಗುವ ಪೂರ್ವದಲ್ಲಿಯೇ ಅವರ ಮೊದಲನೇ ಹೆಂಡತಿ ಮೃತರಾಗಿರುತ್ತಾರೆಂದರೆ ಸರಿ. ಆನಂತರ ಎರಡನೇ ಹೆಂಡತಿಯು ಮೃತರಾಗಿರುತ್ತಾರೆಂದರೆ ಸರಿ. ಸಿದ್ದಗಂಗಪ್ಪನವರು ಸಿದ್ದನಂಜಪ್ಪನಿಗಿಂತ ಪೂರ್ವದಲ್ಲಿಯೇ ಮೃತರಾಗಿರುತ್ತಾರೆ. ಅಕ್ಕಯ್ಯಮ್ಮ ಮತ್ತು ಸಿದ್ದಲಿಂಗಪ್ಪ ಆನಂತರ ಮೃತರಾಗಿರುತ್ತಾರೆ.

ನನ್ನ ತಾಯಿಗೆ ತಿಮ್ಮಯ್ಯ, ಸಿದ್ದಲಿಂಗಪ್ಪ ಮತ್ತು ನಾಗರಾಜಪ್ಪ ಎಂಬ ಮೂರು ಜನ ಮಕ್ಕಳು . ತಿಮ್ಮಯ್ಯನವರು ಮತ್ತು ಸಿದ್ದಲಿಂಗಪ್ಪ ಮೃತರಾಗಿರುತ್ತಾರೆ. ನಾಗರಾಜಪ್ಪನಿಗೆ ವಿವಾಹವಾಗಿದ್ದು, ಅವರ ಹೆಂಡತಿಯ ಹೆಸರು ರೇವಮ್ಮ. ಅವರು ಮೃತರಾಗಿರುತ್ತಾರೆ. ಸಿದ್ದನಂಜಪ್ಪ ಮತ್ತು ಅವರ ಮಕ್ಕಳು ಒಟ್ಟು ಕುಟುಂಬದಲ್ಲಿ ವಾಸವಾಗಿಲ್ಲ ಎಂದರೆ ಸರಿ. ಸದರಿ ಸಿದ್ದನಂಜಪ್ಪ ಮತ್ತು ಸಿದ್ದಗಂಗಪ್ಪನವರಿಗೆ ಒಟ್ಟು ಕುಟುಂಬದ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿ. ನನ್ನ ತಂದೆ ಜೀವಂತವಾಗಿದ್ದ ಕಾಲದಲ್ಲಿ ನಾನಾಗಲೀ ಅಥವಾ ಇತರೆ ವಾದಿಯರಾಗಲೀ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು 15 ವರೆ ಗುಂಟೆ ಆಸ್ತಿಯನ್ನು ಹೆಣ್ಣು ಮಕ್ಕಳಿಗೆ ಬಿಟ್ಟಿದ್ದು, ಅದನ್ನು ನಮಗೆ ಗೊತ್ತಿಲ್ಲದ ರೀತಿಯಲ್ಲಿ ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ. ಆ ರೀತಿ 15 ವರೆ ಗುಂಟೆ ಆಸ್ತಿ ಬಿಟ್ಟ ಬಗ್ಗೆ ದಾಖಲೆ ಇರುವುದಿಲ್ಲ. ಆ ಬಗ್ಗೆ ಖಾತೆ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ಸದರಿ ಆಸ್ತಿಗೆ ಈಗಲೂ ಹೋಗುತ್ತಿರುತ್ತೇವೆ. ತಂದೆ ಮತ್ತು ತಾಯಿಯನ್ನು ಸದರಿ ಆಸ್ತಿಯಲ್ಲಿ ಅಂತ್ಯ ಸಂಸ್ಕಾರ ಮಾಡಿದ್ದು, ಪೂಜೆ ಮಾಡಲು ಹೋಗುತ್ತಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ

ಸಂಗತಿಯನ್ನು ನನ್ನ ವಾದ ಪತ್ರದಲ್ಲಿ ಬರೆಯಿಸಿರುವುದಿಲ್ಲ. ನಾನು ಹೇಳುವಂತೆ ಸದರಿ



ಸ್ವತ್ತಿಗೆ ನಾವು ಹೋಗುವುದಿಲ್ಲ ಮತ್ತು ಅಂತ್ಯ ಸಂಸ್ಕಾರ ಮಾಡಿಲ್ಲ ಎಂದರೆ ಸರಿಯಲ್ಲ.

ಸಿದ್ದನಂಜಯ್ಯನವರಿಗೆ ಯಾವುದೇ ದುರಾಭ್ಯಾಸ ಇರಲಿಲ್ಲ ಎಂದರೆ ಸರಿ. ಅವರು ತಮ್ಮ ಜೀವಿತ ಕಾಲದಲ್ಲಿ ಗೌರವದಿಂದ ಜೀವನ ನಡೆಸಿರುತ್ತಾರೆಂದರೆ ಸರಿ ಮತ್ತು ಹಣಕಾಸಿನ ವ್ಯವಹಾರದಲ್ಲಿ ಯಾರಿಗೂ ಮೋಸ ಮಾಡುವ ಪ್ರವೃತ್ತಿ ಹೊಂದಿರಲಿಲ್ಲ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಸಿದ್ದನಂಜಯ್ಯನವರಿಗೆ ಮುಖಂಡತ್ವದ ಗೌರವ ಮತ್ತು ಯಜಮಾನಿಕೆ ಇತ್ತು ಎಂದರೆ ಸರಿ. ಯಾವುದೇ ತೀರ್ಮಾನ ಮಾಡಬೇಕಾದರೆ ನನ್ನ ತಂದೆಯ ಮುಂದಾಳತ್ವದಲ್ಲಿ ನಡೆಯುತ್ತಿತ್ತು ಮತ್ತು ನಂಬಿಕೆ ಉಳಿಸಿಕೊಂಡಿದ್ದರು ಹಾಗೂ ನಮ್ಮ ಸಮಾಜದಲ್ಲಿ ಅವರಿಗೆ ಗೌರವ ಇತ್ತು ಎಂದರೆ ಸರಿ. ನನ್ನ ತಂದೆಯು ದಿ.23-6-2002 ರಂದು ಮೃತರಾದಾಗ ನಮ್ಮ ಸಮೂದಾಯದವರು ಗೌರವ ಸೂಚಿಸಿದ್ದರು ಎಂದರೆ ಸರಿ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಿಪಿ-1 ರಲ್ಲಿ ಹೆಣ್ಣು ಮಕ್ಕಳನ್ನು ಮಾತ್ರ ಸೇರಿಸಿದ್ದು, ಎಲ್ಲಾ ಸದಸ್ಯರನ್ನು ಸೇರಿಸಿಲ್ಲ ಎಂದರೆ ಸರಿ. ನಿಪಿ-2 ಕ್ರಯಪತ್ರವನ್ನು ಓದಿಸಿ ತಿಳಿದುಕೊಂಡಿರುತ್ತೇನೆ. ಅದರಲ್ಲಿ ಬರೆಯಿಸಿರುವ ವಿಚಾರಗಳು ಸತ್ಯವಾಗಿರುತ್ತದೆ ಎಂದರೆ ಸರಿಯಲ್ಲ. ಅದರಲ್ಲಿ ಬರೆಯಿಸಿರುವ ವಿಷಯಗಳನ್ನು ನಾನು ತಿಳಿದುಕೊಂಡಿರುವುದಿಲ್ಲ.

ದಾವಾಸ್ವತ್ತು ಸಿದ್ದನಂಜಯ್ಯನವರಿಗೆ ಬಂದಿರುವ ಸ್ವಂತ ಆಸ್ತಿ ಎಂದರೆ ಸರಿ. ನಿಪಿ-2 ರಲ್ಲಿ ಸಿದ್ದನಂಜಯ್ಯನವರಿಗೆ ಜರೂರಾಗಿ ಔಷದೋಪಚಾರಗಳಿಗೆ ಹಣ ಬೇಕಾಗಿತ್ತು ಎಂದು ಬರೆಯಲಾಗಿದೆ ಎಂದರೆ ಸರಿ. 6 ನೇ ಪ್ರತಿವಾದಿಗೆ ದಾವಾಸ್ವತ್ತನ್ನು 88 ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಲಾಗಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-2 ಕ್ಕೆ ನನ್ನ ಚಿಕ್ಕಪ್ಪನ ಮಗ ಸಿದ್ದಲಿಂಗಯ್ಯ ಸಹಿ ಮಾಡಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ. ದಿ.22-8-2005 ರಂದು ಸದರಿ ಪತ್ರ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-2 ದಾಖಲೆಯು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಬಗ್ಗೆ ಪತ್ರ ಎಂದರೆ ನನಗೆ ಗೊತ್ತಿಲ್ಲದ ರೀತಿಯಲ್ಲಿ ಮಾರಾಟ ಮಾಡಿರುತ್ತಾರೆ. ನಿಪಿ-2 ರಲ್ಲಿ ಇರುವ ಚೆಕ್ಕುಬಂಧಿ ನನಗೆ ಗೊತ್ತಿರುವುದಿಲ್ಲ. ನಿಪಿ-2 ಪತ್ರವನ್ನು ನಾನೇ ತೆಗೆದುಕೊಂಡಿರುತ್ತೇನೆ. ನಾನು ಸಿದ್ದನಂಜಪ್ಪನವರ ಹೆಸರಿನಲ್ಲಿ ತೆಗೆದುಕೊಂಡಿರುತ್ತೇನೆ. ನಿಪಿ-2 ರಲ್ಲಿ ದಾವಾಸ್ವತ್ತನ್ನು 6 ನೇ ಪ್ರತಿವಾದಿಗೆ ಸ್ವಾಧೀನ ವಹಿಸಿರುವ ಬಗ್ಗೆ ಬರೆಯಲಾಗಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-2 ನ್ನು ಜಲಜಾಕ್ಷಿ ಎಂಬುವವರ ಹೆಸರಿನಲ್ಲಿ ನೋಂದಣಿ ಕಛೇರಿಯಿಂದ ಪಡೆದಿರುತ್ತೇನೆಂದರೆ ನನಗೆ ಗೊತ್ತಿರುವುದಿಲ್ಲ.ನಿಪಿ-2 ಪತ್ರವನ್ನು ಯಾರು ಬರೆಯಿಸಿಕೊಟ್ಟಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನಿಪಿ-3 ಪಹಣಿಯು 6 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಗೊತ್ತಿಲ್ಲದ ರೀತಿಯಲ್ಲಿ ಮಾಡಿಸಿಕೊಂಡಿರುತ್ತಾರೆ.

6 ನೇ ಪ್ರತಿವಾದಿಯು ಯಾವ ಗ್ರಾಮದವರು ಎಂದು ಗೊತ್ತಿರುವುದಿಲ್ಲ. ಅವರ ವಿಳಾಸವನ್ನು ವಾರ್ಡ್ ಕಛೇರಿಯಿಂದ ಪಡೆದುಕೊಂಡಿರುತ್ತೇನೆ. ಸಿದ್ದನಂಜಪ್ಪನವರಿಗೆ ತುರ್ತಾಗಿ ಹಣದ ಅವಶ್ಯಕತೆ ಇದ್ದ ಕಾರಣ 6 ನೇ ಪ್ರತಿವಾದಿಗೆ ದಾವಾಸ್ವತ್ತನ್ನು ಮಾರಾಟ

ಮಾಡಿರುತ್ತಾರೆಂದರೆ ನಮಗೆ ಕೊಟ್ಟಿರುವ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ನಮಗೆ



ಯಾವುದೇ ಆಸ್ತಿಯನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-2 ಕ್ರಯಪತ್ರ ಆಗುವ ಪೂರ್ವದಲ್ಲಿ ದಾವಸ್ವತ್ತಿನ ಕಂದಾಯ ದಾಖಲೆಗಳು ಸಿದ್ದನಂಜಪ್ಪನವರ ಹೆಸರಿನಲ್ಲಿ ನಮೂದಾಗಿತ್ತು ಎಂದರೆ ಸರಿ. ಕ್ರಯಪತ್ರ ಆದ ನಂತರ 6 ನೇ ಪ್ರತಿವಾದಿಯ ಹೆಸರಿಗೆ ಖಾತೆ ನಮೂದಾಗಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸಿದ್ದನಂಜಪ್ಪನವರ ಹೆಸರಿನಲ್ಲಿ ಇದ್ದ ಖಾತೆಯನ್ನು ನೋಡಿ ಕ್ರಯ ಮಾಡಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ. ನಾನು ಮೇಲೆ ಹೇಳಿದಂತೆ ಸಿದ್ದನಂಜಯ್ಯನವರು ಮೃತರಾದ 1 ವರ್ಷದಲ್ಲಿ ತೆಗೆದುಕೊಂಡ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಅದು ಕಳೆದು ಹೋದ ಕಾರಣ ಮತ್ತೊಂದು ಪತ್ರವನ್ನು ತೆಗೆದುಕೊಂಡು ಹಾಜರುಪಡಿಸಿರುತ್ತೇನೆ. ಅದು ನಾವು ತೆಗೆದುಕೊಂಡು 2 ವರ್ಷದಲ್ಲಿ ಮಳೆಯಿಂದ ಹಾನಿಯಾಗಿರುತ್ತದೆ. ನನಗೆ 2005 ರಲ್ಲಿ ಮಾರಾಟ ಮಾಡಿರುವ ವಿಷಯ ಗೊತ್ತಿದ್ದರೂ ಸಹ ಈ ದಾವೆಯನ್ನು ಸಲ್ಲಿಸುವ ಉದ್ದೇಶದಿಂದ ಇತ್ತೀಚೆಗೆ ತೆಗೆದುಕೊಂಡು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. 6 ನೇ ಪ್ರತಿವಾದಿಯು ದಾವಾಸ್ವತ್ತಿನ ಮಾಲೀಕತ್ವನ್ನು ಹೊಂದಿ, ಸ್ವಾಧೀನದಲ್ಲಿ ಇರುತ್ತಾರೆಂದರೆ ಸರಿಯಲ್ಲ. ನಾವು ಸ್ವಾಧೀನದಲ್ಲಿ ಇರುತ್ತೇವೆ. ನನ್ನ ತಂದೆಯು ಮೋಸಮಾಡಿ ಕ್ರಯಪತ್ರ ಮಾಡಿರುತ್ತಾರೆ ಎಂಬುವುದಕ್ಕೆ ಸಂಬಂಧಿಸಿದಂತೆ ನನ್ನ ತಂದೆ ಜೀವಂತವಾಗಿದ್ದ ಕಾಲದಲ್ಲಿ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಏಕೆಂದರೆ ಆನಂತರ ಮೃತರಾಗಿರುತ್ತಾರೆ ಮತ್ತು ಆಸ್ತಿಯನ್ನು ಕೊಡುತ್ತೇವೆಂದು ನನ್ನ ತಂದೆಯು ಹೇಳುತ್ತಾ ಬರುತ್ತಿದ್ದರು.

ದಾವಾಸ್ವತ್ತಿಗೆ ಕಾಂಪೌಂಡ್ ಇದೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಬೆಳೆ ಇರುವುದಿಲ್ಲ ಆದರೆ ನಾವು ಪೂಜೆ ಮಾಡಲು ಹೋಗುತ್ತಿರುತ್ತೇವೆ. ನನ್ನ ಚಿಕ್ಕಪ್ಪನ ಮಗ ಸಿದ್ದಲಿಂಗಯ್ಯನವರ ಜಮೀನಿಗೆ ಕಾಂಪೌಂಡ್ ಇರುವುದಿಲ್ಲ. ಅವರು ಜಮೀನನ್ನು ಉಳಿಸಿಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ನಾನು ದಾವಾಸ್ವತ್ತನ್ನು ನೋಡಿಲ್ಲ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯು ದಾವಾಸ್ವತ್ತಿಗೆ ಕಾಂಪೌಂಡ್ ನ್ನು ನಿರ್ಮಿಸಿಕೊಂಡು ಸ್ವಾಧೀನದಲ್ಲಿ ಇರುತ್ತಾರೆಂದರೆ ಸರಿಯಲ್ಲ. 1 ರಿಂದ 5 ನೇ ಪ್ರತಿವಾದಿಯರು ಸೇರಿ ನಮ್ಮ ಮೂಲಕ ಈ ದಾವೆಯನ್ನು ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಯರ ವಿಳಾಸವನ್ನು ಉದ್ದೇಶಪೂರ್ವಕವಾಗಿ ನಿಖರವಾಗಿ ತಿಳಿಸಿಲ್ಲ ಮತ್ತು ಇತರೇ ವಾದಿಯರ ಪತಿಯ ವಿಳಾಸವನ್ನು ಉದ್ದೇಶಪೂರ್ವಕವಾಗಿ ನಮೂದು ಮಾಡಿಸಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತು ಒಟ್ಟು ಕುಟುಂಬದ ಆಸ್ತಿ ಅಲ್ಲ, ಒಟ್ಟು ಕುಟುಂಬದ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯನ್ನು ಹೆದರಿಸಲು ಸುಳ್ಳು ದಾವೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒಪ್ಪಿದ್ದಾರೆ,

2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ಮಾಗಡಿ.**